**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಳಲ್ಕೆರೆ.**

ಸಿ.ಸಿ. ನಂಃ **1609/2022**

ಫಿರ್ಯಾದಿದಾರರುಃ ಸರ್ಕಾರದ ಪರವಾಗಿ –ಚಿಕ್ಕಜಾಜೂರು ಪೋಲೀಸ್ ಠಾಣೆ

- ವಿರುದ್ದ -

ಆರೋಪಿ ಃ 1. ಆರ್. ಪ್ರದೀಪ ಬಿನ್ ರಾಜಪ್ಪ ,
ವಯಸ್ಸುಃ 30 ವರ್ಷ,
ಕೆಎ–16–ಟಿಸಿ–6928 ರ ಟ್ರ್ಯಾಕ್ಟರ್ ಮತ್ತು ಕೆಎ–16–ಟಿ–4197 ರ ಟ್ರೈಲರ್ ಚಾಲಕ, ವಾಸಃ ಕಡ್ಲೇಗುದ್ದು ಗ್ರಾಮ,
ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ.

**:: ಆ ಪಾ ದ ನೆ ::**

ದಿಃ11–04–2022 ರಂದು ಸಂಜೆ 5–00 ರ ಸಮಯದಲ್ಲಿ1 ನೇ ಆರೋಪಿತನಾದ ನೀನು, ಬೀಮಸಮುದ್ರ– ಹಿರೇಕಂದವಾಡಿ ಗ್ರಾಮಗಳ ಟಾರ್ ರಸ್ತೆಯಲ್ಲಿ ಕೆಎ–16–ಟಿಸಿ–6928 ರ ಟ್ರ್ಯಾಕ್ಟರ್ ಮತ್ತು ಕೆಎ–16–ಟಿ–4197 ರ ಟ್ರೈಲರ್ ನ್ನು ಅತೀವೇಗ ಮತ್ತು ನಿರ್ಲಕ್ಷ್ಯತನದಿಂದ ಮಾನವನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು, ಹಿರೇಕಂದವಾಡಿ ಗ್ರಾಮದ ಹತ್ತಿರ ರಸ್ತೆಯ ತಿರುವಿನಲ್ಲಿ ಟ್ರ್ಯಾಕ್ಟರ್ ನ್ನು ಪಲ್ಟಿ ಹೊಡೆಯಿಸಿ ಅಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ. ಸಂ. ಕಲಂ 279ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತನಾದ ನೀನು ಮೇಲ್ಕಂಡ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದರಿಂದ, ಟ್ರ್ಯಾಕ್ಟರ್ ಟ್ರೈಲರ್ ನಲ್ಲಿದ್ದ ದೊಡ್ಡವರು ಮಕ್ಕಳು ಸೇರಿದಂತೆ ಸುಮಾರು 20 ಕ್ಕೂ ಹೆಚ್ಚು ಜನರು ಕೆಳಗೆ ಬಿದ್ದು, ರಕ್ತಗಾಯಗಳಾಗಿ ಹಿರೇಗುಂಟನೂರು ಗ್ರಾಮದ ಧನುಷ್ ಎಂಬ ಬಾಲಕನಿಗೆ ತಲೆಗೆ, ಮೈ ಕೈಗೆ ತೀವ್ರವಾಗಿ ಪೆಟ್ಟು ಬಿದ್ದು , ರಕ್ತಗಾಯಗಳಾಗಿ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆ ಕರೆದುಕೊಂಡು ಹೋಗಿ ದಾಖಲಿಸಿದಾಗ, ಮಾರ್ಗಮಧ್ಯದಲ್ಲಿಯೇ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿರುತ್ತಾರೆ. ಈ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಮೂರನೇಯದಾಗಿ ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತನಾದ ನೀನು ಮೇಲ್ಕಂಡ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದರಿಂದ, ಸಾಕ್ಷಿ–12

ರಿಂದ ಸಾಕ್ಷಿ–25, ಸಾಕ್ಷಿ–27 ಮತ್ತು ಸಾಕ್ಷಿ–28 ರವರಿಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ಮೂಲಕ 1 ನೇ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ 337 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ನಾಲ್ಕಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತನಾದ ನೀನು ಮೇಲ್ಕಂಡ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದರಿಂದ, ಸಾಕ್ಷಿ–29 ರಿಂದ ಸಾಕ್ಷಿ–ಸಾಕ್ಷಿ–28 ರವರಿಗೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ಮೂಲಕ 1 ನೇ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ 338 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತನಾದ ನೀನು ಚಾಲನ ಪರವಾನಿಗೆ ಇಲ್ಲದೇ ಕೆಎ–16–ಟಿಸಿ–6928 ರ ಟ್ರ್ಯಾಕ್ಟರ್ ಮತ್ತು ಕೆಎ–16–ಟಿ–4197 ರ ಟ್ರೈಲರ್ ನ್ನು ಚಾಲನೆ ಮಾಡಿ ಅಪಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ 1 ನೇ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾರತೀಯ ಮೋಟರ್ ವಾಹನ ಕಾಯಿದೆ ಕಲಂ 3 ಸಹವಾಚಕ ಕಲಂ 181 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಪ್ರಶ್ನೆ–1. ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ –

ಪ್ರಶ್ನೆ–2. ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ನಂತರ ಅವರು ನೀಡಿದ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ದಿಃ22–08–2023

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಹೊಳಲ್ಕೆರೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ. ನಂಃ **18/2022**

ಫಿರ್ಯಾದಿದಾರರುಃ ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸ್ ಠಾಣೆ

- ವಿರುದ್ಧ -

ಆರೋಪಿ ಃ 2. ನಾಗರಾಜಪ್ಪ ಬಿನ್ ಷಣ್ಮುಖಪ್ಪ ,
ವಯಸ್ಸುಃ 48 ವರ್ಷ,
ಕೆಎ-16-ಯು-8673 ರ ಎಂ/ಸಿ ರೈಡರ್,
ವಾಸಃ ಕೊಡಗವಳ್ಳಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**:: ಆ ಪಾ ದ ನೆ ::**

ದಿಃ01-04-2021 ರಂದು ಸಂಜೆ 6-30 ರ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಚಿಕ್ಕಜಾಜೂರು ಗ್ರಾಮದ ಹತ್ತಿರ ಇರುವ, ಎಸ್ಸಾರ್ ಪೆಟ್ರೋಲ್ ಬಂಕ್ ನ ಮುಂಭಾಗ ಹಾದುಹೋಗಿರುವ ಹೊಳಲ್ಕೆರೆ-ದಾವಣಗೆರೆ ಟಾರ್ ರಸ್ತೆಯ ಪಶ್ಚಿಮದ ಅಂಚಿನಲ್ಲಿ 1 ನೇ ಆರೋಪಿಯು ನೊಂದಣಿ ಮಾಡಿಸದ ಚಾಸಿಸ್ ನಂಃ ME15KAOA8A200193 ರ ಮೋಟರ್ ಸೈಕಲ್‌ನ್ನು ಚಿಕ್ಕಜಾಜೂರು ಗ್ರಾಮದ ಕಡೆಯಿಂದ ಹೊಳಲ್ಕೆರೆ ಕಡೆಗೆ ಅತೀವೇಗ ಮತ್ತು ನಿರ್ಲಕ್ಷ್ಯತನದಿಂದ ಮಾನವನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು, ಯಾವುದೇ ಮುನ್ಸೂಚನೆ ನೀಡದೇ ಎಸ್ಸಾರ್ ಪೆಟ್ರೋಲ್ ಬಂಕ್ ಕಡೆಗೆ ಏಕಾಏಕಿ ತಿರುಗಿಸಿದಾಗ, 2 ನೇ ಆರೋಪಿಯಾದ ನೀನು ಚಿಕ್ಕಜಾಜೂರು ಗ್ರಾಮದ ಕಡೆಗೆ ಕೆಎ-16-ಯು-8673 ರ ಮೋಟಾರ್ ಸೈಕಲ್ ನ್ನು ಅತೀವೇಗ ಮತ್ತು ನಿರ್ಲಕ್ಷ್ಯತನದಿಂದ ಮಾನವನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು, 1 ನೇ ಆರೋಪಿತನ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ 2 ನೇ ಆರೋಪಿತಯಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ. ಸಂ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀನು ಕೆಎ-16-ಯು-8673 ರ ಮೋಟಾರ್ ಸೈಕಲ್ ನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದರಿಂದ, 1 ನೇ ಆರೋಪಿಯ ಬಲಕೈ, ಮುಂಗೈ, ಬಲಭುಜಕ್ಕೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ 338 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಮೂರನೇಯದಾಗಿ ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀನು ಮೇಲ್ಕಂಡ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದರಿಂದ, ಮೋಟಾರ್ ಸೈಕಲ್ ಗಳು ಜಖಂಗೊಂಡು 2 ನೇ ಆರೋಪಿಯಾದ ನಿನ್ನ ತಲೆಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ 337 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ನಾಲ್ಕಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀನು ಚಾಲನ ಪರವಾನಿಗೆ ಇಲ್ಲದೇ ಕೆಎ–16–ಯು–8673 ರ ಮೋಟರ್ ಸೈಕಲ್ ನ್ನು ಚಾಲನೆ ಮಾಡಿ ಅಪಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ 2 ನೇ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾರತೀಯ ಮೋಟರ್ ವಾಹನ ಕಾಯಿದೆ ಕಲಂ 3 ಸಹವಾಚಕ ಕಲಂ 181 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಕೊನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀನ ವಿಮೆ ಮಾಡಿಸದೇ ಕೆಎ–16–ಯು–8673 ರ ಮೋಟಾರ್ ಸೈಕಲ್ ನ್ನು ಚಾಲನೆ ಮಾಡಿ ಅಪಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ 2 ನೇ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾರತೀಯ ಮೋಟರ್ ವಾಹನ ಕಾಯಿದೆ ಕಲಂ 146 ಸಹವಾಚಕ ಕಲಂ 196 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಪ್ರಶ್ನೆ–1. ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ –

ಪ್ರಶ್ನೆ–2. ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ನಂತರ ಅವರು ನೀಡಿದ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ದಿಃ20–12–2022

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಹೊಳಲ್ಕೆರೆ